# ವಿಜಯಶ್ರೀ ಸಬರದರವರ ಕಾವ್ಯಗಳಲ್ಲಿ ಮಹಿಳಾ ಚಿಂತನೆ

**ನಾಗೇಂದ್ರಪ್ಪ ಶಿವಶರಣಪ್ಪ**

ಅತಿಥಿ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರು, ಬಸವಕಲ್ಯಾಣ, ಬೀದರ.

**Received: 07/12/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619562**

## ABSTRACT:

ಆಧುನಿಕ ಕಾವ್ಯಗಳನ್ನು ಅವಲೋಕಿಸಿದಾಗ ವಿಜಯಶ್ರೀ ಸಬರದರವರ ಕಾವ್ಯಗಳಲ್ಲಿ ಮಹಿಳಾ ಪರ ಚಿಂತನೆಗಳನ್ನು ಕಾಣುತ್ತೇವೆ. ಮಹಿಳೆಯನ್ನು ಪುರುಷ ಪ್ರಧಾನವಾದ ವ್ಯವಸ್ಥೆಯಲ್ಲಿ ಎರಡನೆಯ ದರ್ಜೆಯ ಪ್ರಜೆ ಎಂದು ಪರಿಗಣಿಸಿ ಆಕೆಯನ್ನು ವಿದ್ಯೆಯಿಂದ, ಅಸ್ತಿಯಿಂದ, ಸ್ವಾತಂತ್ರ್ಯದಿಂದ ದೂರವಿಡಲಾಗಿತ್ತು. ಆಕೆಗೆ ಸ್ವಾತಂತ್ರ್ಯವನ್ನು ಕೊಡಬಾರದು ಎಂದು ಈ ದೇಶದ ಧರ್ಮ ಗ್ರಂಥಗಳು ಹೇಳುತ್ತವೆ. ಆಕೆ ಮೈಲಿಗೆ, ಮಾಯೆ, ಚಂಚಲೆ, ಎಂದು ಕರೆಯುವುದರ ಮೂಲಕ ಅತ್ಯಂತ ಕೀಳಾಗಿ ಕಾಣುತ್ತಿದ್ದರು. ಮಹಿಳೆ ಜೀವನ ಪರ್ಯಂತ ಅಸ್ಪೃಶ್ಯಳಾಗಿ ಬದುಕುವಂತಹ ಅನಿವಾರ್ಯ ಪದ್ಧತಿ ಈ ದೇಶದ ಚರಿತ್ರೆಯಲ್ಲಿತ್ತು. ವೇದಗಳಲ್ಲಿ ಆಕೆಯನ್ನು ತುಂಬಾ ಹೀನಾಯವಾಗಿ ನೋಡುತ್ತಾರೆ. ಮಹಿಳೆಗೆ ಬುದ್ಧಿ ಕಡಿಮೆ ಇದೆ, ಅವಳ ಹೃದಯ ಕಿರುಬನಿಗಿಂತಲೂ ಕ್ರೂರವಾದುದು ಎಂದು ಹೇಳುತ್ತಾರೆ. ದೇಶದ ಪುರಾಣ, ಇತಿಹಾಸ, ಚರಿತ್ರೆ, ಯಜ್ಞಾವಲ್ಕ ಚಾಣುಕ್ಯ, ಮುಂತಾದವರು ಅವರ ಅಸ್ಥಿತ್ವವನ್ನು ನಿರಾಕರಿಸುತ್ತಲೇ ಬಂದಿದ್ದಾರೆ.

## KEYWORDS:

ಮೈಲಿಗೆ, ಮಾಯೆ, ಚಂಚಲೆ, ದೇಶದ ಪುರಾಣ, ಇತಿಹಾಸ, ಚರಿತ್ರೆ, ಯಜ್ಞಾವಲ್ಕ, ಚಾಣುಕ್ಯ.

ಹನ್ನೆರಡನೆಯ ಶತಮಾನದ ಬಸವಾದಿ ಶರಣರು ಆಕೆಯನ್ನು ತಾಯಿ, ಸಹೋದರಿ, ಮಗಳೆಂದು ತಿಳಿದು ಗೌರವದ ಸ್ಥಾನವನ್ನು ನೀಡುತ್ತಾರೆ. ಮೋಲೆ ಮೂಡಿ ಬಂದರೆ ಹೆಣ್ಣೆಂಬರು ಗಡ್ಡಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮ ಹೆಣ್ಣು ಅಲ್ಲ ಗಂಡು ಅಲ್ಲ ಕಾಣಾ ರಾಮನಾಥ ಎಂದು ಹೇಳುವುದರ ಮೂಲಕ ಸ್ತ್ರೀ ಸಮಾನತೆಯನ್ನು ಸಾರಿದರು. ಇವರ ನಂತರ ಅನೇಕ ಶತಮಾನಗಳ ಮೇಲೆ ಬ್ರಿಟಿಷರ ಶಿಕ್ಷಣ ಪದ್ಧತಿ ಮತ್ತು ಅಕ್ಷರದವ್ವ ಸಾವಿತ್ರಿಬಾಯಿ ಪುಲೆಯವರ ತ್ಯಾಗ ಮತ್ತು ಹೋರಾಟದ ಮೂಲಕ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬಂದರು. ಅವರು ನೀಡಿರುವ ಸ್ವಾತ್ರಂತ್ರ್ಯ, ಸಮಾನತೆ ತತ್ವದ ಅಡಿಯಲ್ಲಿ ಇಂದು ಮಹಿಳೆ ಪುರುಷರಷ್ಟೇ ಸಶಕ್ತವಾಗಿ ಬದುಕುತ್ತಿದ್ದಾಳೆ. ಇಂದು ದೇಶದ ದೊಡ್ಡ ದೊಡ್ಡ

ಹುದ್ದೆಗಳಲ್ಲಿ ಮಹಿಳೆ ಮಿಂಚುತ್ತಿದ್ದಾಳೆ ಇದಕ್ಕೆಲ್ಲ ಭಾರತ ಸಂವಿಧಾನವೇ ಪ್ರಮುಖ ಕಾರಣ. ಬಾಬಾ ಸಾಹೇಬರ, ಬಸವಣ್ಣನವರ ಚಳುವಳಿಗಳಿಂದ ಪ್ರೇರಣೆ ಪಡೆದ ಅನೇಕ ಕನ್ನಡ ಕವಿಗಳು ಮಹಿಳೆಯರಿಗೆ ಆಗುತ್ತಿರುವ ಅವಮಾನ, ಶೋಷಣೆ, ಮತ್ತು ಅವರ ಏಳಿಗೆಯನ್ನು ನಿರ್ಭಿಡೆಯಿಂದ ಅಕ್ಷರ ರೂಪಕ್ಕೆ ಇಳಿಸಿದ್ದಾರೆ. ಅಂತಹ ಮಹಿಳಾ ಚಿಂತನೆಯ ಕಾವ್ಯಗಳು ವಿಜಯಶ್ರೀ ಸಬರದರವರ ಆಧುನಿಕ ಕಾವ್ಯದಲ್ಲಿ ನಾವು ಗಮನಿಸಬಹುದು. ಕಾವ್ಯಗಳಲ್ಲಿ ಅಡಗಿರುವ ಮಹಿಳಾ ಅಸ್ಮಿತೆಯನ್ನು ಇಲ್ಲಿ ಚರ್ಚಿಸಲಾಗಿದೆ.

**ಅಕ್ಕಾ**
**ನೀನು ಮಹಾದೇವಿಯಾಗಿ**
**ಮಲ್ಲಿಕಾರ್ಜುನನನ್ನು ಹುಡುಕುತ್ತಾ**
**ತಿರುಗಾಡಿದ್ದು ಇದೇ ನಾಡ**
**ಇಲ್ಲಾ**
**ಖಂಡಿತಾ ಇರಲಿಕ್ಕಿಲ್ಲ**
**ಈ ದುರ್ಯೋಧನರ ಮಧ್ಯ**
**ದುಶ್ಯಾಸನರ ನಡುವೆ**
**ನೀನು ಬತ್ತಲೆಯಾಗೇ**
**ಬದುಕಿದೆಯೆಂದರೆ**
**ನಮಗೆ ಭಯವಾಗುತ್ತಿದೆ**
**ಅಕ್ಕ-ತಂಗಿ ಎನ್ನುತ್ತ**
**ನಯ-ವಿನಯದ ಮಾತನಾಡುತ್ತಲೇ**
**ಹಾದರರದಹಡದಿ ಹೊಚ್ಚುವ**
**ಈ ಹಲ್ಕಾಗಳನ್ನು ಕಂಡರೆ**
**ಮೈ ಬೆವರುತ್ತದೆ**
**ಮನಸಿಡಿಯುತ್ತದೆ.**

ಡಾ. ವಿಜಯಶ್ರೀ ಸಬರದ ಅವರು ಸ್ತ್ರೀಪರ ಚಿಂತಕಿಯಾಗಿ ಅನೇಕ ಹೋರಾಟಗಳಲ್ಲಿ ಭಾಗವಹಿಸುತ್ತಾ ಮಹಿಳ ಸಮಸ್ಯೆಗಳನ್ನು ಎತ್ತಿ ಹಿಡಿದು ಅವುಗಳಿಗೆ ಅಕ್ಷರ ರೂಪ ಕೊಟ್ಟು ಪ್ರಭುತ್ವದ ಕಣ್ಣು ತೆರೆಸಿದವರು. 'ಅಕ್ಕನಿಗೆ' ಎಂಬ ಕವನದಲ್ಲಿ ತುಂಬಾ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಾರೆ. 12ನೇ ಶತಮಾನದ ಕಾಲದಲ್ಲಿ ಇದೇ ಕನ್ನಡದ ನೆಲದಲ್ಲಿ ಮಹಾದೇವಿಯಕ್ಕಾ ಮಲ್ಲಿಕಾರ್ಜುನನ್ನು ಹುಡುಕುತ್ತಾ ಉಡುತಡಿಯಿಂದ ಕಲ್ಯಾಣದ ನಾಡಿನವರೆಗೆ ಬೆತ್ತಲೆಯಾಗಿ ಬರುತ್ತಾಳೆ. ಆದರೆ ಕವಿಯಿತ್ರಿ ಇಲ್ಲಿ ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾಳೆ. ಒಬ್ಬಂಟಿಯಾದ ಹೆಣ್ಣು ಮನೆಯಿಂದ ಹೊರಗಡೆ ಹೋಗಿ ತಿರುಗಿ ಸುರಕ್ಷಿತವಾಗಿ ಮನೆಗೆ ಸೇರುತ್ತಾಳೆಯೇ ಇಲ್ಲ ಎಂಬ ಆತಂಕದಲ್ಲಿ ಇಂದು ಬದುಕುತ್ತಿದ್ದೇವೆ. ಅದಕ್ಕೆ ಅವರು ಅಕ್ಕಾನಿಗೆ ಕೇಳುತ್ತಾರೆ ನೀನು ಇದೇ ನೆಲದಲ್ಲಿ ಬೆತ್ತಲೆಯಾಗಿ ತಿರುಗಾಡಿದ್ದಿಯಾ? ಎಂದು ನನಗೆ

ನಂಬಿಕೆಯಿಲ್ಲ ಯಾಕೆಂದರೆ ದುಶ್ಯಾಸನ, ದುರ್ಯೋಧನರಂತಹ ಜನ ತುಂಬಿ ಹೋಗಿದ್ದಾರೆ. ನೀನು ಹೇಗೆ ಅವರ ಮಧ್ಯದಲ್ಲಿ ಬದುಕಿದ್ದಿಯಾ. ಇದು ತುಂಬಾ ನೋವಿನ ವಿಚಾರ ನಮಗೆ ಭಯವಾಗುತ್ತಿದೆ ಅಕ್ಕ. ಅಕ್ಕ-ತಂಗಿ ಎಂದು ನಯವಿನಯದಿಂದ ಮಾತನಾಡುತ್ತಲೆ ಹಾದರಕ್ಕೆ ಇಳಿಸುವ ಹಲ್ಕಾಗಳು ತುಂಬಿ ಹೋಗಿದ್ದಾರೆ. ಮೈ ಬೆವರುತ್ತದೆ ಮನ ಸಿಡಿಯುತ್ತದೆ ಇದೆಲ್ಲವನ್ನು ಕಂಡರೆ ಎಲ್ಲಿ ಹೋದರು ಮಹಿಳೆಗೆ ರಕ್ಷಣೆ ಇಲ್ಲವಾಗುತ್ತಿದೆ. ಉದ್ಯೋಗ ಮಾಡುವಾಗ ಅಧಿಕಾರಿಗಳು, ಬಸ್ಸಿನಲ್ಲಿ ಪ್ರಯಾಣಿಸುವಾಗ ಪುಂಡಾಪೋಕಾರಿಗಳು ಹೀಗಿರುವಾಗ ನೀನೆ ದಿಟ್ಟ ಅಕ್ಕಾ ಇಂತಹವರ ಮಧ್ಯದಲ್ಲಿ ನೀನು ಬದುಕಿದೆಯಲ್ಲ ಎಂದು ಕವಿಯಿತ್ರಿ ಹೇಳುತ್ತಾರೆ.

**ನಾವು ಸ್ತ್ರೀಯರು**
**ಶತ ಶತಮಾನಗಳಿಂದ**
**ನಿಮ್ಮ ಭೋಗದ ವಸ್ತುಗಳಾಗಿ**
**ಕರಗಿ-ಕೊರಗಿ ಹೋದವರು.**
**ಪತಿಯ ಪಾದ ಪೂಜೆಯಲ್ಲೇ**
**ಆಯುಷ್ಯ ಸವೆಸಿದವರು.**
**ಅತ್ತೆ ಮಾವರಿಗಂಜಿ**
**ಮತ್ತೆ ಮೈದುನಗಂಜಿ**
**ತೊತ್ತಾಗಿ ಸತ್ತಂತೆ ಬಾಳಿದವರು**
**ಧರ್ಮದ ಹೆಸರಿನಲ್ಲಿ, ನೀತಿಯ ನೆಪದಲ್ಲಿ**
**ನಿಮ್ಮ ಬಲೆಯಲ್ಲಿ ಸಿಕ್ಕು ಬಳಲಿದ ಮೀನುಗಳು**
**ನಿಮ್ಮ ಲಕ್ಷ್ಮಣರೇಖೆ ದಾಟದ ಸೀತೆಯರು ಅಲ್ಲವೆ?**
**ಹಾಗಂತ ಖುಷಿ ಪಡಬೇಡಿ**
**ಒಳಗೊಳಗೆ ಕನಸು ಕಂಡು**
**ನಿರಾಶೆಯಾಗಬೇಡಿ**
**ನಾವಿಂದು ಮನುಷ್ಯರಾಗಿದ್ದೇವೆ**
**ಇಂಚು-ಇಂಚಿಗೆ ಕೊಲ್ಲುವ**
**ನಿಮ್ಮ ಧರ್ಮ ದೇವರುಗಳನ್ನು ಕಿತ್ತೆಸೆದಿದ್ದೇವೆ.**
**ನಮ್ಮ ಬದುಕನ್ನೇ ನುಂಗಿದ**
**ನಿಮ್ಮ ನೀತಿಗೆ ಬೆಂಕಿಯಿಟ್ಟಿದ್ದೆವೆ**

'ಲಕ್ಷ್ಮಣರೇಖೆ' ದಾಟಿದವರು ಎಂಬ ಕವಿತೆಯಲ್ಲಿ ವಿಜಯಶ್ರೀ ಸಬರದ ಅವರು ಶತ ಶತಮಾನಗಳಿಂದ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ಮತ್ತು ದಬ್ಬಾಳಿಕೆಗಳನ್ನು ಖಂಡಿಸಿದ್ದಾರೆ. ಸಾವಿರಾರು ವರ್ಷಗಳಿಂದ ಭೋಗದ ವಸ್ತುಗಳ

ಹಾಗೆ ನಮ್ಮನ್ನು ಬಳಸಿ ಬಿಸಾಡಿದ್ದ ನಿಮ್ಮ ವ್ಯವಸ್ಥೆಗೆ ಧಿಕ್ಕಾರವಿದೆ. ನಿಮ್ಮ ಅಡಿಯಾಳನ್ನಾಗಿಸಿಕೊಂಡು ನಮ್ಮ ಆಸೆ ಆಕಾಂಕ್ಷೆಗಳನ್ನು ಬಲಿಕೊಟ್ಟವರು ನೀವು. ಪತಿಯ ಪಾದ ಪೂಜೆಯಲ್ಲಿ ಆಯುಷ್ಯವನ್ನು ಕರಗಿಸಿದವರು ನಾವು. ಅತ್ತೆ ಮಾವ ಮೈದುನ ಎಂದು ಎಲ್ಲರಿಗೂ ಅಂಜಿ ಸತ್ತಂತೆ ಬದುಕಿದ್ದೇವೆ. ನಿಮ್ಮ ಧರ್ಮ, ನೀತಿ ಸಂಪ್ರದಾಯದ ಹೆಸರಿನಲ್ಲಿ ನಮ್ಮನ್ನು ಸಿಲುಕಿಸಿ ನಮ್ಮ ಬದುಕನ್ನೆ ಕಸಿದು ಕೊಂಡವರು ನೀವು. ಹಾಗಂತ ನೀವು ಸಂತೋಷ ಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇಂದು ನಾವು ಸಬಲರಾಗಿದ್ದೇವೆ. ಕಾಯ್ದೆ ಕಾನೂನುಗಳು ತಿಳಿದಿದ್ದೇವೆ, ಪುರುಷರಷ್ಟೆ ಸಮಾನವಾಗಿ ಬದುಕುತ್ತಿದ್ದೇವೆ. ಆದರೂ ದೇವರು ಮತ್ತು ಧರ್ಮದ ಹೆಸರಿನಲ್ಲಿ ನಮ್ಮನ್ನು ಮತ್ತೆ ಬಂಧಿಸುತ್ತಿದ್ದೀರಿ ಆದರೆ ನಾವು ಕೂಡ ನಿಮ್ಮ ಬಂದನಕ್ಕೆ ಸಿಲುಕುವದಿಲ್ಲ ನಿಮ್ಮ ದೇವರನ್ನು ಕಿತ್ತೆಸೆದಿದ್ದೇವೆ ನಿಮ್ಮ ಧರ್ಮವನ್ನು ತೊರೆದು ನಾವಿಂದೂ ಮಾನವ ಧರ್ಮವನ್ನು ಪ್ರೀತಿಸುತ್ತೇವೆ ಎಲ್ಲರೊಳಗೆ ಒಂದಾಗಿ ಸ್ವತಂತ್ರ ಬದುಕನ್ನು ರೂಪಿಸಿಕೊಂಡು ಬದುಕುತ್ತೇವೆ ಎಂದು ವ್ಯವಸ್ಥೆಗೆ ಸವಾಲೊಡ್ಡಿದ್ದಾರೆ.

**ಪರಮಾರ್ಶನ ಗ್ರಂಥಗಳು:**


1. ವಿಜಯಶ್ರೀ ಸಬರದ, (2019), ಕಾವ್ಯ ಸಂಗಮ (ಆಯ್ದ ಕವಿತೆಗಳು), ಸಿವಿಜಿ ಇಂಡಿಯಾ, ಬೆಂಗಳೂರು.
2. ಶೇಷಗಿರಿ ರಾವ್ ಎಲ್.ಎಸ್. (2017), ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು,
3. ಮುಗಳಿ ರಂ.ಶ್ರೀ. (2018), ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.